**ಸಾಕ್ಷಿಯನ್ನು ದಿನಾಂಕಃ 19.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎಸ್.ಬಿ, ವಕೀಲರಿಂದಃ**

ದಿನಾಂಕ 29.09.2014 ರಂದು ಮೈಸೂರಿನಿಂದ ಇಬ್ಜಾಲಕ್ಕೆ ಬಂದಾಗ ಸಂಜೆ 5.45–6.00 ಗಂಟೆಯಾಗಿತ್ತು. ಆ ದಿವಸ ನಮ್ಮ ಬಸ್ಸಿನಲ್ಲಿ 15–20 ಜನ ಪ್ರಯಾಣಿಕರಿದ್ದರು. ಆ ದಿವಸ ಪ್ರಯಾಣಿಸುತ್ತಿದ್ದ ಪ್ರಯಾಣಿಕರ ಹೆಸರನ್ನು ಹೇಳಲಾಗುವುದಿಲ್ಲ. ಇಬ್ಜಾಲಕ್ಕೆ ಬರುವಾಗ ತಿರುವು ಇರುವುದರಿಂದ ಮುಂದೆ ಬರುವ ಜನರು ಅಥವಾ ವಾಹನವಾಗಲಿ ಕಾಣುವುದಿಲ್ಲ ಎಂದರೆ ಸರಿ. ಕಾಳಿಹುಂಡಿಯಿಂದ ಇಬ್ಜಾಲಕ್ಕೆ ಹೋಗುವ ರಸ್ತೆ ತುಂಬಾ ಚಿಕ್ಕದಾಗಿರುತ್ತದೆ ಎಂದರೆ ಸರಿ. ಆ ದಿವಸ ಚಾಸಾ–1 ರವರು ತುಂಬಾ ಹಾರ್ನ್ ಮಾಡಿಕೊಂಡು ಬಸ್ಸನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ರೀತಿ ತುಂಬಾ ಹಾರ್ನ್ ಮಾಡಿಕೊಂಡು ಚಾಲನೆ ಮಾಡುತ್ತಿದ್ದರಿಂದ ಚಾಸಾ–1 ಮತ್ತು ಗ್ರಾಮಸ್ಥರ ನಡುವೆ ಮಾತುಕತೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಆ ದಿವಸ ನಾವು ಹೋಗುತ್ತಿದ್ದ ಬಸ್ಸಿಗೆ ಎರಡು ಬಾಗಿಲುಗಳಿದ್ದವು. ಇಬ್ಜಾಲಕ್ಕೆ ಹೋಗುವ ಪ್ರವೇಶ ದ್ವಾರದಿಂದ ಬಸ್ ಸ್ಟ್ಯಾಂಡ್ ಗೆ ಎಷ್ಟು ದೂರವಿರುತ್ತದೆ ಎಂದು ನನಗೆ ನೆನಪಿಲ್ಲ. ದಿನಾಂಕ 29.09.2014 ರಂದು ಯಾವುದೇ ಜಗಳವಾಗಿಲ್ಲ ಎಂದರೆ ಸರಿಯಲ್ಲ. ಆ ದಿವಸ ಯಾವುದೇ ಗಲಾಟೆ ಮಾಡಿಲ್ಲ ಮತ್ತು ನಮ್ಮ ಸಮವಸ್ತ್ರವನ್ನು ಹರಿದುಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ನಮ್ಮ ಇಲಾಖೆಯ ನೌಕರರಾಗಿರುವುದರಿಂದ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಮೈಸೂರಿಗೆ ವಾಪಸ್ ಎಷ್ಟು ಗಂಟೆಗೆ ಹೋಗಬೇಕಾಗಿತ್ತು ಎಂದು ನನಗೆ ನೆನಪಿಲ್ಲ. ಆ ದಿವಸ ಮೈಸೂರು–ಕಾಳಿಹುಂಡಿ ಮಾರ್ಗವನ್ನು ಮುಗಿಸಿ ಹೋಗುವಾಗ ತುಂಬಾ ತಡವಾಗಿತ್ತು ಎಂದರೆ ನನಗೆ ನೆನಪಿಲ್ಲ. ತಡವಾಗಿ ಹೋಗಿದ್ದಕ್ಕೆ ಡಿಪೋ ಮ್ಯಾನೇಜರ್ ಗೆ ಕಾರಣ

ಕೊಡಬೇಕಾಗುತ್ತದೆಂಬ ಉದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೆ ಹೇಳಿಕೆ ನೀಡಿಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**